O.S. ನಂಬರಃ 23/2022
ಪಿ. ಡಬ್ಲ್ಯೂಃ 1

ದಿಃ 19-11-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 2ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎ.ಎನ್.ಟಿ ಇವರಿಂದಃ

ನಿಮ್ಮ ತಂದೆಯವರು ದಿಃ 09-06-1988 ರಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ. ನಂತರ ಎಷ್ಟು ವರ್ಷಗಳ ನಂತರ ವಾಂಟಣಿ ಮಾಡಿಕೊಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ವಾಂಟಣಿ ಆಗಿರುವುದಿಲ್ಲ. ಸರಕಾರದಿಂದ ಸವಲತ್ತು ಸಿಗುವ ಉದ್ದೇಶದಿಂದ ಮೂರು ಜನರಿಗೂ ಸ್ವಲ್ಪ ಸ್ವಲ್ಪ ಪಾಲನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಹೇಳುವ ಪ್ರಕಾರ ಪಾಲನ್ನು ಮಾಡಿಕೊಟ್ಟ ನಂತರ ಬೇರೆ ಯಾವುದೇ ಕುಟುಂಬದ ಆಸ್ತಿ ಉಳಿದುಕೊಂಡಿದ್ದು ಇರುವುದಿಲ್ಲ ಎಂದರೆ ಸರಿ. ಪಾಲು ಆದ ನಂತರ ಮುಟೇಶನ ಎಂಟ್ರಿ ನಂ.1127 ನೆದ್ದನ್ನು ಮಂಜೂರಿಯಾಗಿದ್ದು, ಅದನ್ನು ನೀವು ಹಾಜರುಪಡಿಸಿರುತ್ತೀರಿ ಎಂದರೆ ಇರಬಹುದು. ಅದೇ ರೀತಿ ಸೂರ್ವೆ ಗ್ರಾಮದ ಜಮೀನುಗಳನ್ನು ಪಾಲು ಮಾಡಿಕೊಂಡಿರುತ್ತೀರಿ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಸ್ವಲ್ಪ ಜಮೀನುಗಳನ್ನು ನನಗೆ ಹಾಗೂ ಸ್ವಲ್ಪ ಜಮೀನನ್ನು ನನ್ನ ಸಹೋದರಿಯಾದ 1 ನೇ ಪ್ರತಿವಾದಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಎಲ್ಲ ಆಸ್ತಿಗಳನ್ನು ಇಂದಿನವರೆಗೂ ನಾನೇ

ನೋಡಿಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಎಲ್ಲ ಆಸ್ತಿಗಳನ್ನು ಇಂದಿನವರೆಗೂ ನೀವೇ ನೋಡಿಕೊಳ್ಳುತ್ತಿದ್ದೀರಿ ಎಂದು ತೋರಿಸಲು ಏನಾದರೂ ದಾಖಲಾತಿಗಳು ಇರುತ್ತವೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಾಲು ಮಾಡಿಕೊಂಡ ಪ್ರಕಾರ ಪ್ರತ್ಯೇಕವಾಗಿ ಕಬ್ಜಾ ವಹಿವಾಟು ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸರಿ. ಸಾಕ್ಷಿಯು ಸ್ವತಃ 2018 ನೇ ಸಾಲಿನವರೆಗೂ ಪ್ರತಿವಾದಿಯ ಯಾವುದೇ ಜಮೀನನ್ನು ನೋಡಿಕೊಂಡಿರುವುದಿಲ್ಲ, ನಾನೇ ನೋಡಿಕೊಂಡು ಬರುತ್ತಿದ್ದೆ ಎಂದು ನುಡಿಯುತ್ತಾರೆ. ಇದನ್ನು ತೋರಿಸಲು ನಿಮ್ಮ ಹತ್ತಿರ ದಾಖಲಾತಿಗಳು ಇವೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಾಲು ಮಾಡಿಕೊಂಡ ಸಂದರ್ಭದಲ್ಲಿ ನೀವೇನಾದರೂ ತಕರಾರನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ತಕರಾರನ್ನು ಮಾಡಿರುವುದಿಲ್ಲ, ಆದರೆ ನಾವೆಲ್ಲರೂ ಒಟ್ಟಿಗೆ ಇದ್ದೇವು ಎಂದು ನುಡಿಯುತ್ತಾರೆ. ಪಾಲು ಮಾಡಿಕೊಂಡ ನಂತರ ನೀವು ಒಟ್ಟಾಗಿ ಇದ್ದೀರಿ ಎಂದು ತೋರಿಸಲು ದಾಖಲಾತಿ ಇವೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಒಟ್ಟಾಗಿ ಉಳಿದುಕೊಂಡು ಬಂದಿರುತ್ತೀರಿ ಎಂದು ತೋರಿಸಲು ಯಾರನ್ನಾದರೂ ನಿಮ್ಮ ಪರವಾಗಿ ಸಾಕ್ಷಿಯನ್ನು ಮಾಡಿಸುತ್ತೀರಾ ಎಂದರೆ ಸಾಕ್ಷಿಯು ಮಾಡಿಸಬಹುದು ಎಂದು ನುಡಿಯುತ್ತಾರೆ. ಯಾರನ್ನು ಸಾಕ್ಷಿಯನ್ನು ಮಾಡಿಸುತ್ತೀರಿ ಎಂದರೆ ಸಾಕ್ಷಿಯು ಈಗ ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯೂ 1990 ನೇ ಸಾಲಿನ ಪೂರ್ವದಿಂದಲೂ ಅಂಕೋಲಾದ ಲಕ್ಷ್ಮೇಶ್ವರ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಇಸವಿ ಗೊತ್ತಿರುವುದಿಲ್ಲ,

ಆದರೆ ವಾಸಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಸೂರ್ವೆ ಗ್ರಾಮದಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ನಮ್ಮ ಜೊತೆಗೆ ಇದ್ದು, ನಂತರ 2ನೇ ಸಹೋದರಿಯ ಮದುವೆಯಾದ ನಂತರ ಬೇರೆ ವಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನೀವು ಪಾಲು ಮಾಡಿಕೊಂಡ ನಂತರ 1ನೇ ಪ್ರತಿವಾದಿಯು ತಮಗೆ ಬಂದ ಆಸ್ತಿಯನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 2ನೇ ಪ್ರತಿವಾದಿಗೆ ಬಂದ ಆಸ್ತಿಯನ್ನು ಅವರು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು, ಅಭಿವೃದ್ಧಿಪಡಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

2. ಮುಟೇಶನ್ ಸಂಖ್ಯೆ 1127 ನೆದ್ದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ನಾವೆಲ್ಲರೂ ಒಟ್ಟಿಗೆ ಇದ್ದೀದ್ದರಿಂದ ಯಾವುದೇ ತಕರಾರು ಬಂದಿರುವುದಿಲ್ಲ, ಆದ ಕಾರಣ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಪಾಲಿಗೆ ಬಂದ ಆಸ್ತಿಯನ್ನು ಆಕೆಯು ಅಭಿವೃದ್ಧಿಪಡಿಸಿಕೊಂಡಿದ್ದರಿಂದ ಅದನ್ನೂ ಸಹ ಕಬಳಿಸುವ ಉದ್ದೇಶದಿಂದ ನೀವು ಮತ್ತು 1ನೇ ಪ್ರತಿವಾಯು ಸೇರಿಕೊಂಡು ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿರುತ್ತೇವೆ ಎಂದರೆ ಸರಿಯಲ್ಲ.

3. 2ನೇ ಪ್ರತಿವಾದಿಗೆ ಹಂಚಿಕೆಯಾದ 5ನೇ ದಾವಾ ಆಸ್ತಿಯನ್ನು 2ನೇ ಪ್ರತಿವಾದಿಯು ಸ್ವತಂತ್ರವಾಗಿ ಸಾಗುವಳಿ ಮಾಡಿಕೊಂಡು ಅಭಿವೃದ್ಧಿಪಡಿಸಿಕೊಂಡು ಬಂದಿರುತ್ತಾಳೆ ಎಂದರೆ

ಆ ವಿಷಯ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಗೆ ಬಂದ ಜಮೀನಿನಲ್ಲಿ ನಿಮಗಾಗಲಿ ಅಥವಾ 1ನೇ ಪ್ರತಿವಾದಿಗಾಗಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯ ನಮ್ಮ ತಂದೆಯವರು ಹಕ್ಕು ಇರುತ್ತದೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಪ್ರತಿವಾದಿಯರ ಮಧ್ಯ ಒಟ್ಟು ಕುಟುಂಬ ಎನ್ನುವುದು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು 2ನೇ ಪ್ರತಿವಾದಿಯ ವಿಭಕ್ತ ಸಹೋದರಿ ಎಂದರೆ ಸರಿಯಲ್ಲ. ನೀವು ವಾಂಟಣಿ ಮಾಡಿಕೊಳ್ಳುವ ಸಲುವಾಗಿ ದಿಃ25-07-2018 ರಂದು 2ನೇ ಪ್ರತಿವಾದಿಯನ್ನು ಸಂಪರ್ಕ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮೇಲೆ ದ್ವೇಷವಿರುವ ಕಾರಣ ಅವರಿಗೆ ಬುದ್ಧಿ ಕಲಿಸುವ ಉದ್ದೇಶದಿಂದ ಈ ರೀತಿಯ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.